UASB Library
Newspaper Clippings
WEDNESDAY 04.01.2023 PG.01
Jai Kisan

ರಾಗಿ ಖರೀದಿ ಕೇಂದ್ರಗಳಲ್ಲಿ ರೈತರಿಗೆ ಕಿರುಕುಳ

ಅರಸೀಕೆರೆ: ನ್ಯಾಫೆಡ್ ಮೂಲಕ ರೈತರ ರಾಗಿಯನ್ನು ಖರೀದಿಸಬೇಕೆಂದು ರಾಜ್ಯ ಸರ್ಕಾರ ಸೂಚಿಸಿದೆ. ಆದರೆ ಪಹಣಿಗಳಲ್ಲಿನ ದೋಷಗಳಿಂದ ರೈತರ ರಾಗಿಯನ್ನು ನ್ಯಾಫೆಡ್‌ಗಳಿಗೆ ತರಲಾಗುತ್ತಿಲ್ಲ ಎಂದು ಯುವ ಕಾಂಗ್ರೆಸ್ ಮುಖಂಡ ಗೋವರ್ಧನ್ ಹಾಗೂ ಮಾಜಿ ಪುರಸಭಾ ಸದಸ್ಯ ಪದ್ಮಜಾ ಭಾನುವಾರ ಹಲವು ರೈತರೊಂದಿಗೆ ತಹಸೀಲ್ದಾರ್ ವಿದ್ಯಾ ವಿಭವಾ ರಾಥೋಡ್ ಅವರಿಗೆ ಮನವಿ ಪತ್ರ ನೀಡಿ ತಕ್ಷಣವೇ ಪಹಣಿಯಲ್ಲಿನ ತಪ್ಪುಗಳನ್ನು ಸರಿಪಡಿಸಲು ಒತ್ತಾಯಿಸಿದರು.

ರಾಗಿಯನ್ನು ಬೆಂಬಲ ಬೆಲೆಯಲ್ಲಿ ನೀಡಲು ರೈತರು ಒಂದು ಕಚೇರಿಯಿಂದ ಇನ್ನೊಂದು ಕಚೇರಿಗೆ ಅಲೆದಾಡುತ್ತಿದ್ದಾರೆ. ಪಹಣಿಯಲ್ಲಿ ದೋಷ ಒಂದೆಡೆಯಾದರೆ 5 ಎಕರೆ ಒಳಗಿನ ರೈತರನ್ನು ಸಣ್ಣ ರೈತರೆಂದು ಸರ್ಕಾರ ಘೋಷಿಸಿದೆ. ಆದರೆ ನ್ಯಾಫೆಡ್ ಕೇಂದ್ರಗಳಲ್ಲಿ 4 ಎಕರೆಗಿಂತ ಕಡಿಮೆ ಭೂಮಿ ಪಹಣಿಯಲ್ಲಿ ದಾಖಲಾಗಿರಬೇಕು. ಜಮೀನು ಮಾದರಿಯು ಖುಷ್ಕಿ ಎಂದು ನಮೂದಾಗಿರಬೇಕು, ಆಗ ಮಾತ್ರ ರಾಗಿ ಖರೀದಿಸುವುದು ಎನ್ನುತ್ತಾರೆ; ಆದರೆ ಈ ದಾಖಲೆಗಳನ್ನು ನಿರ್ವಹಿಸುವವರು ಗ್ರಾಮ ಲೆಕ್ಕಾಧಿಕಾರಿ ಹಾಗು ಸರ್ವೆಯರ್‌ಗಳು. ರೈತ ಜಾನುವಾರುಗಳ ಮೇವಿನ ಉದ್ದೇಶದಿಂದ ತನ್ನ ಎಲ್ಲಾ ಜಮೀನುಗಳಲ್ಲಿ ರಾಗಿಯನ್ನು ಬೆಳೆಯುತ್ತಿದ್ದು ಅಧಿಕಾರಿಗಳು ತಮಗೆ ತೋಚಿದಂತೆ ಪಹಣಿಯಲ್ಲಿ ತಪ್ಪು ಮಾಹಿತಿ ದಾಖಲಿಸಿ ರೈತರಿಗೆ ಅನ್ಯಾಯವಾಗುತ್ತಿದೆ ಎಂದು ದೂರಿದರು. ಈ ಬಗ್ಗೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪಹಣಿಯ ಲೋಪ ದೋಷಗಳನ್ನು ಸರಿಪಡಿಸಬೇಕೆಂದು ಒತ್ತಾಯಿಸಿದರು. ರೈತರ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸದಿದ್ದರೆ ಕಾಂಗ್ರೆಸ್ ಪಕ್ಷದಿಂದ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.ಮಾಜಿ ಪುರಸಭಾ ಸದಸ್ಯ ಶ್ರೀನಿವಾಸ, ಕಾಂಗ್ರೆಸ್ ಮುಖಂಡರಾದ ನಿಂಗೇಗೌಡ, ಜಯಂತ್, ಮಲ್ಲಿಕಾರ್ಜುನ್, ಸಂತೋಷ್, ಉಮೇಶ್ ಉಪಸ್ಥಿತರಿದ್ದರು.



Samyuktha Karnataka
Pg.05

ಬಡವರಿಗೆ ಪ್ರತಿ ತಿಂಗಳು ನೀಡುತ್ತಿದ್ದ 10 ಕೆ.ಜಿ ಧಾನ್ಯದಲ್ಲಿ ಇನ್ನು ಮುಂದೆ ಅರ್ಧ ಕಡಿಮೆ

ಪಡಿತರಕ್ಕೆ ಕತ್ತರಿ ಕಾಂಗ್ರೆಸ್ ಆಕ್ರೋಶ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಸರ್ಕಾರ 81 ಕೋಟಿ ಬಡವರಿಗೆ ನೀಡುತ್ತಿರುವ ಪಡಿತರದಲ್ಲಿ ಅರ್ಧದಷ್ಟು ಕಡಿಮೆ ಮಾಡಿರುವುದಕ್ಕೆ ಕಾಂಗ್ರೆಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಬಡವರಿಗೆ ನೀಡುತ್ತಿದ್ದ 10 ಕೆ.ಜಿ ಪಡಿತರದ ಬದಲು, ಇನ್ನು ಮುಂದೆ ಕೇವಲ 5 ಕೆ.ಜಿ ಧಾನ್ಯ ನೀಡಲಾಗುತ್ತದೆ. ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ(ಪಿಎಂಜಿಕೆಎವೈ) ಅಡಿಯಲ್ಲಿ ನೀಡಲಾಗುತ್ತಿದ್ದ 5 ಕೆ.ಜಿ ಧಾನ್ಯವನ್ನು ನಿಲ್ಲಿಸಲಾಗಿದೆ. ಇದು ಮೋದಿ ಸರ್ಕಾರ ಹೊಸ ವರ್ಷದ ಕೊಡುಗೆ. ಈ ಕ್ರಮ ಬಡವರಲ್ಲಿ ಅತೃಪ್ತಿ ಮೂಡಿಸಿದೆ ಎಂದು ಎಐಐಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ.

ಐದು ಕೆಜಿ ಆಹಾರ ಧಾನ್ಯ ಕಡಿತಗೊಳಿಸುವ ಕ್ರಮದ ಕುರಿತು ರಾಜ್ಯ ಸರ್ಕಾರಗಳ ಜೊತೆ ಸಮಾಲೋಚಿಸಿಯೂ ಇಲ್ಲ, ಸಂಸತ್ತಿನಲ್ಲಿ ಚರ್ಚೆಯೂ ನಡೆಸಿಲ್ಲ ಎಂದು ಅವರು ಆಕ್ಷೇಪಿಸಿದ್ದಾರೆ.

ಕೊರೋನಾ ಸಾಂಕ್ರಾಮಿಕ ತೀವ್ರವಾಗಿ ಹರಡಿಕೊಂಡಾಗ 28 ತಿಂಗಳ ಹಿಂದೆ ಆಹಾರಭದ್ರತಾ ಕಾಯ್ದೆ ಅಡಿ ಪಡಿತರದಲ್ಲಿ ನೀಡಲಾಗುತ್ತಿದ್ದ 5 ಕೆ.ಜಿ ಧಾನ್ಯದ ಜೊತೆಗೆ ಹೆಚ್ಚುವರಿಯಾಗಿ ಪಿಎಂಜಿಕೆವೈ ಅಡಿಯಲ್ಲಿ 5 ಕೆ.ಜಿ ನೀಡಲು ನಿರ್ಧರಿಸಲಾಗಿತ್ತು. ಇದರಿಂದ ಬಡವರಿಗೆ ಅನುಕೂಲವಾಗಿತ್ತು. ಆದರೆ ಡಿಸೆಂಬರ್‌ನಲ್ಲಿ ಹೆಚ್ಚುವರಿಯಾಗಿ ದೊರೆಯುತ್ತಿದ್ದ ಧಾನ್ಯವನ್ನು ಅಂತ್ಯಗೊಳಿಸಲಾಗಿದೆ.

ಆದ್ಯತೆಯ ಮನೆಗಳ (ಪಿಎಚ್‌ಎಚ್) ಫಲಾನುಭವಿಗಳಿಗೆ 5 ಕೆ.ಜಿ ಮತ್ತು ಅಂತ್ಯೋದಯ ಯೋಜನೆ ಫಲಾನುಭವಿಗಳಿಗೆ 35 ಕೆ.ಜಿ ಆಹಾರ ಧಾನ್ಯ ನೀಡುವುದಾಗಿ ಕೇಂದ್ರ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ಆದರೆ ಪಿಎಂಜಿಕೆವೈ ಅಡಿಯಲ್ಲಿ ನೀಡುತ್ತಿದ್ದ ಆಹಾರ ಧಾನ್ಯ ನಿಲ್ಲಿಸಿರುವುದನ್ನು ಅವರ ಪ್ರಸ್ತಾಪಿಸಿಲ್ಲ ಎಂದು ಜೈರಾಮ್ ರಮೇಶ್ ಕಟುವಾಗಿ ಟೀಕಿಸಿದ್ದಾರೆ.

ಪಡಿತರ ಸಹಾಯಧನ ಕಡಿತ ಒಂದೆಡೆಯಾದರೆ, 2021ನೇ ಸಾಲಿನ ಜನಗಣತಿಯ ವಿಳಂಬದಿಂದ ಹತ್ತು ಕೋಟಿ ಜನರು ಪಡಿತರ ಚೀಟಿಯಿಂದ ಹೊರಗುಳಿದಿದ್ದಾರೆ. ಆಹಾರ ಭದ್ರತಾ ಕಾಯ್ದೆಯಡಿ ನವಜಾತ ಶಿಶು ಮತ್ತು ಬಾಣಂತಿಯರಿಗೆ 6 ಸಾವಿರ ರೂ. ನೀಡಬೇಕಾಗುತ್ತದೆ. ಇದನ್ನು ಮೋದಿ ಸರ್ಕಾರ 5 ಸಾವಿರಕ್ಕೆ ಇಳಿಸಿದೆ.



■ ಜೈರಾಮ್ ರಮೇಶ್
ಎಐಸಿಸಿ ಪ್ರಧಾನ ಕಾರ್ಯದರ್ಶಿ



ಪರಿಣಾಮವೇನು?

ಪಡಿತರದ ಸಬ್ಸಿಡಿ ಕಡಿತದಿಂದ ಒಂದು ಲಕ್ಷ ಕೋಟಿ ರೂಪಾಯಿ ಉಳಿತಾಯವಾಗುತ್ತದೆ. ಇದರಿಂದ ಬಡ ಕುಟುಂಬಗಳ ಮೇಲೆ ಹೆಚ್ಚುವರಿ ಭಾರ ಬೀಳುತ್ತದೆ. ಐದು ಸದಸ್ಯರ ಕುಟುಂಬ ಪ್ರತಿ ತಿಂಗಳು 750 ರೂ.ನಂತೆ ವರ್ಷಕ್ಕೆ ಹೆಚ್ಚುವರಿಯಾಗಿ 9 ಸಾವಿರ ರೂ ಖರ್ಚು ಮಾಡಬೇಕಾಗಿದೆ.

ಸಮೀಕ್ಷೆ ಏನು ಹೇಳುತ್ತಿವೆ

■ 2022ರ ಜಾಗತಿಕ ಹಸಿವು ಸೂಚ್ಯಂಕದಂತೆ ಭಾರತ 121 ದೇಶಗಳ ಸಾಲಿನಲ್ಲಿ 121ನೇ ಸ್ಥಾನ ಪಡೆದಿದೆ.

■ ಹಂಗರ್ ವಾಚ್ ಸಮೀಕ್ಷೆಯನುಸಾರ ಶೇ 80ರಷ್ಟು ಮಂದಿಗೆ ಆಹಾರ ಭದ್ರತೆಯ ಕೊರತೆ ಎದುರಾಗಿದೆ.

ರಸಗೊಬ್ಬರ ಸಬ್ಸಿಡಿಯೂ ಕಡಿತ

ರಸಗೊಬ್ಬರದ ಮೇಲೆ ನೀಡುತ್ತಿರುವ ಸಬ್ಸಿಡಿಗೆ ಈ ಬಾರಿ ಬಜೆಟ್‌ನಲ್ಲಿ ಕತ್ತರಿ ಬೀಳುವ ಸಾಧ್ಯತೆ ಇದೆ. ಈ ಸಭೆಯಲ್ಲಿ ಭಾಗವಹಿಸಿದ್ದ ಅಧಿಕಾರಿಗಳು ಈ ಮಾಹಿತಿಯನ್ನು ತಿಳಿಸಿದ್ದಾರೆ. ಇದರಿಂದ 3.7 ಲಕ್ಷ ಕೋಟಿ ರೂ. ಸರ್ಕಾರಕ್ಕೆ ಉಳಿಯಲಿದೆ. ಈ ಮೂಲಕ ಆರ್ಥಿಕ ಕೊರತೆಯನ್ನು ತಗ್ಗಿಸಲು ಸರ್ಕಾರ ಚಿಂತಿಸಿದೆ.

Samyuktha Karnataka
Pg.07

ಜೈವಿಕ ಅನಿಲ ಘಟಕ ಸ್ಥಾಪನೆಗೆ ಅನುಮತಿ

ಸಂ.ಕ.ಸಮಾಚಾರ, ಬೆಂಗಳೂರು

ಬೆಂಗಳೂರಿನ ಹೊರವಲಯದ ಬಿಬಿಎಂಪಿ ವ್ಯಾಪ್ತಿಯ ಜಾಗದಲ್ಲಿ ಸಂಕುಚಿತ ಜೈವಿಕ ಅನಿಲ (ಸಿಎನ್‌ಜಿ) ಘಟಕ ಸ್ಥಾಪಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದ್ದು, 18 ಎಕರೆ ಪ್ರದೇಶದಲ್ಲಿ ಈ ಅನಿಲ ಘಟಕ ತಲೆ ಎತ್ತಲಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಪ್ರತಿದಿನ 4,500 ಟನ್ ತ್ಯಾಜ್ಯದಲ್ಲಿ ಶೇ.50ಕ್ಕಿಂತ ಕಡಿಮೆ ತ್ಯಾಜ್ಯ ಸಂಸ್ಕರಿಸಲಾಗುತ್ತಿದೆ. ಉಳಿದ ತ್ಯಾಜ್ಯವನ್ನು ಸುರಿಯುವ ಬದಲು ವೈಜ್ಞಾನಿಕವಾಗಿ ಸಂಸ್ಕರಿಸುವ ಶೇಕಡಾವಾರು ಜೈವಿಕ ಅನಿಲ ಹೆಚ್ಚಿಸಬಹುದಾಗಿದೆ. ಈ ಕಾರಣದಿಂದಲೇ ಬಿಬಿಎಂಪಿಯು ಘಟಕ ಸ್ಥಾಪನೆಗೆ ಅನುಮತಿ ಪಡೆದ ಗಯಲ್ ಗ್ಯಾಸ್ ಲಿಮಿಟೆಡ್ ಕಂಪನಿಗೆ ಪ್ರತಿದಿನ 300 ಟನ್ ಹಸಿ ತ್ಯಾಜ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಿಕೊಂಡಿದೆ.

ರಾಜ್ಯ ಸರ್ಕಾರದ ನಿರ್ದೇಶನ ಮೇರೆಗೆ ಬಿಬಿಎಂಪಿಯು 18 ಎಕರೆ ಭೂಮಿಯನ್ನು 25 ವರ್ಷಗಳ ಅವಧಿಗೆ ಕಂಪನಿಗೆ ಹಸ್ತಾಂತರಿಸಿದೆ. ಸಾವಯವ ಹಸಿ ತ್ಯಾಜ್ಯವನ್ನು ಪೂರೈಸಲಿದೆ. ಈ ಘಟಕವು ದಿನಕ್ಕೆ 10.7 ಟನ್ ಸಂಕುಚಿತ ಜೈವಿಕ ಅನಿಲ, ಸುಮಾರು 31.39 ಮೆಟ್ರಿಕ್ ಟನ್ ಗೊಬ್ಬರ ಮತ್ತು 180 ಮಿ.ಟನ್ ಹುದುಗಿಸಿದ ಸಾವಯವ ಗೊಬ್ಬರವನ್ನು ಉತ್ಪಾದಿಸುವ ನಿರೀಕ್ಷೆಯಿದೆ. ಘಟಕ 65.11 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿದೆ. ಈ ಪೈಕಿ ಶೇ.40ರಷ್ಟು ಹಣವನ್ನು ಕಂಪನಿ ಭರಿಸಿದರೆ, ಬಾಕಿ ಶೇ.60ರಷ್ಟು ಬ್ಯಾಂಕ್ ಸಾಲದ ಮೂಲಕ ಮತ್ತು ಕೇಂದ್ರ ಸರ್ಕಾರ ಕಾರ್ಯಕ್ರಮಗಳ ಸಹಾಯಧನದ ಮೂಲಕ ಪಡೆಯಲಾಗುತ್ತದೆ.

ಪರಿಸರ ಸ್ನೇಹಿ ಮತ್ತು ಹಸಿ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಶುದ್ಧ ನೈಸರ್ಗಿಕ ಅನಿಲವನ್ನು ಉತ್ಪಾದಿಸುತ್ತದೆ. ಭವಿಷ್ಯದಲ್ಲಿ ಹಸಿ ತ್ಯಾಜ್ಯವನ್ನು 500 ಟನ್‌ಗಳಿಗೆ ವಿಸ್ತರಿಸಲು ಬಿಬಿಎಂಪಿ ಯೋಜಿಸಿದೆ. ಈ ಮೂಲಕ ನಗರದಲ್ಲಿ ಉತ್ಪಾದನೆಯಾಗುವ ಹಸಿ ತ್ಯಾಜ್ಯ ಸಮಸ್ಯೆ ನಿವಾರಿಸಲು ನಾಗರಿಕ ಸಂಸ್ಥೆ ಮುಂದಾಗಿದೆ. ಈ ನಿಟ್ಟಿನಲ್ಲಿ ಘಟಕ ಸ್ಥಾಪಿಸಲಿರುವ ಕಂಪನಿಗೆ ಬಿಬಿಎಂಪಿ ಕೆಲವು ಷರತ್ತುಗಳನ್ನು ವಿಧಿಸಿದೆ.

Samyuktha Karnataka
Pg.09



ಕೃಷಿ ಇಲಾಖೆಯಿಂದ ನಡೆದ ರೈತ ದಿನಾಚರಣೆಯಲ್ಲಿ ಪ್ರಗತಿಪರ ರೈತರನ್ನು ಸನ್ಮಾನಿಸಲಾಯಿತು

'ಸಮಗ್ರ ಕೃಷಿ ನಿರ್ವಹಣೆ ಪದ್ಧತಿಯಿಂದ ಪರಿಹಾರ'

ಪ್ರಜಾವಾಣಿ ವಾರ್ತೆ

ಯಲಹಂಕ: ರೈತರು ಬೆಳೆಗಳನ್ನು ಬೆಳೆಯುವ ಸಂದರ್ಭದಲ್ಲಿ ರೋಗ ಮತ್ತು ಕೀಟಗಳ ಬಾಧೆಯು ಸಾಮಾನ್ಯ ಸಮಸ್ಯೆಯಾಗಿದ್ದು, ಇತ್ತೀಚೆಗೆ ಇದು ಹೆಚ್ಚಾಗಿದೆ. ರೈತರು ಹೆಚ್ಚಿನ ನಷ್ಟ ಅನುಭವಿಸುತ್ತಿದ್ದಾರೆ. ಸಮಗ್ರ ಕೃಷಿ ನಿರ್ವಹಣೆ ಪದ್ಧತಿ ಅನುಸರಿಸಿದರೆ ಪರಿಹಾರ ದೊರೆಯಲಿದೆ ಎಂದು ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿ ಡಾ.ಸಿ.ಪಿ.ಮಂಜುಳ ಹೇಳಿದರು.

ಕೃಷಿ ಇಲಾಖೆ, ತಾಲ್ಲೂಕು ಕೃಷಿಕ ಸಮಾಜ ಹಾಗೂ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಯುವಕ ರೈತಘಟಕದ ಸಹಯೋಗದಲ್ಲಿ ಯಶೋದ ನಗರದ ಸಹಾಯಕ ಕೃಷಿ ನಿರ್ದೇಶಕ ಕಚೇರಿಯ ಆವರಣದಲ್ಲಿ ಆಯೋಜಿಸಿದ್ದ ರೈತ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಹಿಂದೆ ಪಕ್ಷಿಗಳು ಕೀಟಗಳನ್ನು ತಿನ್ನುತ್ತಿದ್ದವು. ಕೊಟ್ಟಿಗೆ ಗೊಬ್ಬರ ಬಳಕೆ, ಬೂದಿ ಎರಚುವ ಪದ್ಧತಿಗಳನ್ನು ಕೃಷಿಯಲ್ಲಿ ಅನುಸರಿಸಲಾಗುತ್ತಿತ್ತು. ಆದರೆ, ಇಂದು ಕೇವಲ ಕೀಟನಾಶಕಗಳಿಗಷ್ಟೇ ಸೀಮಿತರಾಗಿದ್ದೇವೆ. ಇದರ ಪರಿಣಾಮ ಇಂತಹ ಸಮಸ್ಯೆಗಳು ಎದುರಾಗುತ್ತಿವೆ. ಹಳೆಯ ಪದ್ಧತಿಗಳ ಜೊತೆಗೆ ಕೀಟನಾಶಕಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸುವುದರಿಂದ ಮಣ್ಣಿನ ಆರೋಗ್ಯ ಫಲವತ್ತಾಗಿರುವುದರ ಜೊತೆಗೆ ಔಷಧಿಗಳಿಗೆ ತಗಲುವ ವೆಚ್ಚವೂ ಕಡಿಮೆಯಾಗಿ ಮನುಷ್ಯನ ಆರೋಗ್ಯ ಉತ್ತಮವಾಗಲಿದೆ' ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ಮಣ್ಣು ವಿಜ್ಞಾನಿ ಡಾ.ಜಿ.ಜಿ.ಕಾದಳ್ಳಿ, ಮಣ್ಣಿನ ಗುಣ-ವಿಶೇಷತೆಗಳು, ಮಹತ್ವ ಮತ್ತು ಸಂರಕ್ಷಣೆ ಕುರಿತು ಮಾಹಿತಿ ನೀಡಿದರು.

ಪ್ರಶಸ್ತಿ: ಆತ್ಮ ಯೋಜನೆ ಅಡಿಯಲ್ಲಿ 8 ಮಂದಿ ಹಾಗೂ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಯುವಕ ರೈತಘಟಕದ ವತಿಯಿಂದ 3 ಮಂದಿ ಪ್ರಗತಿಪರ ರೈತರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ನವೋದಯ ವಿದ್ಯಾಲಯ

PrajaVani
Pg.03

ಇನ್‌ಸ್ಟಂಟ್ ಕಾಫಿ ರಫ್ತು ಹೆಚ್ಚಳ

ಹೊಸದಿಲ್ಲಿ: ಏಷ್ಯಾ ಖಂಡದಲ್ಲೇ ಮೂರನೇ ಅತಿದೊಡ್ಡ ಕಾಫಿ ಉತ್ಪಾದನೆ ಹಾಗೂ ರಫ್ತು ಮಾಡುವ ರಾಷ್ಟ್ರವೆನಿಸಿರುವ ಭಾರತವು 2022ರಲ್ಲಿ 4 ಲಕ್ಷ ಟನ್ ಕಾಫಿ ರಫ್ತು ಮಾಡುವ ಮೂಲಕ ಶೇ.2ರಷ್ಟು ಬೆಳವಣಿಗೆ ಸಾಧಿಸಲಾಗಿದೆ ಎಂದು ಭಾರತೀಯ ಕಾಫಿ ಮಂಡಳಿ ತಿಳಿಸಿದೆ. ಈ ವರ್ಷದ ಕಾಫಿ ರಫ್ತಿನ ಮೊತ್ತ 8,762.47 ಕೋಟಿ ರೂ.ಗಳಷ್ಟು ಆಗಿದ್ದು, ಕಳೆದ 2021ರ ಅಂತ್ಯಕ್ಕೆ ಭಾರತದಿಂದ 6,984.67 ಕೋಟಿ ರೂ.ಗಳ ಮೊತ್ತದ 3.93 ಲಕ್ಷ ಟನ್ ಕಾಫಿ ರಫ್ತು ಮಾಡಲಾಗಿತ್ತು.

ಇನ್‌ಸ್ಟಂಟ್ ಕಾಫಿ ಮಾತ್ರವಲ್ಲದೇ, ರೊಬಸ್ಟ ಮತ್ತು ಅರೇಬಿಕಾ ಪ್ರಕಾರದ ಕಾಫಿಗಳನ್ನು ಭಾರತ ರಫ್ತು ಮಾಡುತ್ತದೆ. ಕಾಫಿ ಮಂಡಳಿ ವಾರ್ಷಿಕ ವರದಿಯ ಪ್ರಕಾರ, ರೊಬಸ್ಟ ಕಾಫಿ ರಫ್ತಿನ ಪ್ರಮಾಣ ಕಳೆದ ವರ್ಷದ 2,20,997 ಟನ್‌ಗಳಿಂದ ಈ ವರ್ಷ 2,20,974 ಟನ್‌ಗಳಿಗೆ ಕುಸಿದಿದೆ. ಅದೇ ರೀತಿ, ಅರೇಬಿಕಾ ಪ್ರಕಾರದ ಕಾಫಿ ರಫ್ತು ಶೇ.11ರಷ್ಟು ಕುಸಿತ ಕಂಡಿದ್ದು, ಕಳೆದ ವರ್ಷದ 50,292 ಟನ್‌ಗಳಿಂದ ಈ ವರ್ಷ 44,452 ಟನ್‌ಗಳಿಗೆ ಇಳಿಕೆಯಾಗಿದೆ. ಆದರೆ ಇನ್‌ಸ್ಟಂಟ್ ಕಾಫಿ ರಫ್ತಿನ ಪ್ರಮಾಣ ಶೇ.16.73ರಷ್ಟು ಹೆಚ್ಚಳ ದಾಖಲಿಸಿದೆ. 2021ರಲ್ಲಿ 29,819 ಟನ್ ಇನ್‌ಸ್ಟಂಟ್ ಕಾಫಿ ರಫ್ತಾಗಿದ್ದರೆ, 2022ರಲ್ಲಿ 35,810 ಟನ್ ರಫ್ತಾಗಿದೆ. ಅಲ್ಲದೇ 99,513 ಟನ್‌ಗಳನ್ನು ಇನ್‌ಸ್ಟಂಟ್ ಕಾಫಿ ಮರು ರಫ್ತು ಮಾಡಲಾಗಿದೆ. ರಫ್ತಾದ ಕಾಫಿ ದರವು ಉಳಿದೆಲ್ಲ ಕಾಫಿ ರಫ್ತು ರಾಷ್ಟ್ರಗಳಿಗಿಂತ ಅಧಿಕವಾಗಿದ್ದು, ಭಾರತದ ಕಾಫಿ ಪ್ರತಿ ಟನ್‌ಗೆ 2,18,923 ರೂ.ಗಳಷ್ಟು ದರ ಗಿಟ್ಟಿಸಿಕೊಂಡಿದೆ. ಕಳೆದ ವರ್ಷ 1,77,406 ರೂ.ಗಳ ದರ ನಿಗದಿಯಾಗಿತ್ತು.



ಇಟಲಿ, ಜರ್ಮನಿ ಮತ್ತು ರಷ್ಯಾ ರಾಷ್ಟ್ರಗಳಿಗೆ ಭಾರತದಿಂದ ಕಾಫಿ ರಫ್ತಾಗುತ್ತದೆ. ಸಿಸಿಎಲ್ ಪ್ರಾಡಕ್ಟ್ಸ್ ಇಂಡಿಯಾ, ಟಾಟಾ ಕಾಫಿ, ಐಟಿಸಿ ಲಿಮಿಟೆಡ್, ಓಲಂ ಅಗ್ರೊ, ವಿದ್ಯಾ ಹರ್ಬ್ಸ್ ಮತ್ತು ಸಕ್ಕೆನ್ ಕಾಫಿ ಇಂಡಿಯಾ ಕಾಫಿ ರಫ್ತು ಮಾಡುವ ಪ್ರಮುಖ ಕಂಪನಿಗಳಾಗಿವೆ.

Vijaya Karnataka
Pg.05

ಕಾಫಿ ಇಳುವರಿ ಕಸಿದ ಅಕಾಲಿಕ ಮಳೆ

ಚಿಕ್ಕಮಗಳೂರು: ಮಳೆ ಬಂದರೆ ಕೇಡಲ್ಲ... ಎಂಬ ಆಶಾಭಾವದ ಮಾತು ಈ ಬಾರಿ ಕಾಫಿ ಬೆಳೆಗಾರರಲ್ಲಿ ನಿರಾಸೆಯ ಸೆಲೆಯನ್ನೇ ಸೃಷ್ಟಿಸಿದೆ. ವರ್ಷ ಪೂರ್ತಿ ಸುರಿದ ಮಳೆಯಿಂದಾಗಿ ಕಾಫಿ ಫಸಲಿನ ಇಳುವರಿ ಕುಂಠಿತಗೊಂಡಿದೆ. ಕೈಗೆ ಬಂದ ವರ್ಷದ ಬೆಳೆಯನ್ನು ಮನೆಗೆ ತರುವ ಹೊತ್ತಿಗೆ ಮಳೆರಾಯ ಕಾಫಿ ಬೆಳೆಯ ಜತೆಗೆ ಬೆಳೆಗಾರರ ನಿರೀಕ್ಷೆಯನ್ನೂ ಅತಿವೃಷ್ಟಿಯಲ್ಲಿ ಕೊಚ್ಚಿಕೊಂಡು ಹೋಗಿದ್ದಾನೆ.

ಈ ವರ್ಷ ಮಳೆಗಾಲದ ನಂತರವೂ ವರುಣ ಅಕಾಲಿಕವಾಗಿ ಅಬ್ಬರಿಸಿದ್ದರಿಂದ ಅರೇಬಿಕಾ ಕಾಫಿ ಮೇಲೆ ತುಸು ಹೆಚ್ಚೇ ವ್ಯತಿರಿಕ್ತ ಪರಿಣಾಮ ಬೀರಿದೆ. ಕಾಫಿ ಹೂವಾಗುವ ಸಮಯದಲ್ಲಿ ಮಳೆ ಪೂರಕವಾಗಿದ್ದರಿಂದ ಬೆಳೆ ಚೆನ್ನಾಗಿತ್ತು. ಆದರೆ ಕಟಾವು ಕಾಲವಾದ ನವೆಂಬರ್‌ನಲ್ಲಿ ಹವಾಮಾನ ವೈಪರೀತ್ಯದಿಂದ ಮಳೆ ಸುರಿದಿದ್ದರಿಂದ ಹಣ್ಣಾದ ಕಾಫಿ ಕೊಯ್ಲಿಗೂ ಸಿಗದೆ ಮಣ್ಣಲ್ಲಿ ಮಣ್ಣಾಗಿದೆ.

ಚಿಕ್ಕಮಗಳೂರು ಸೇರಿದಂತೆ ಹಾಸನ, ಕೊಡಗು ಜಿಲ್ಲೆಗಳಲ್ಲಿ ಮುಂಗಾರಿನಲ್ಲಿ ಅತಿವೃಷ್ಟಿಯಿಂದ ಒಟ್ಟಾರೆ ಶೇ.30ರಷ್ಟು ಕಾಫಿ ಬೆಳೆ ನಷ್ಟವಾಗಿದೆ. ನಂತರ ಅಕಾಲಿಕ ಮಳೆಯಿಂದಾಗಿ ಶೇ.15ರಷ್ಟು ಕಾಫಿ ಬೆಳೆ ನಷ್ಟವಾಗಿದೆ. ಇದೂವರೆಗೆ ಸರಕಾರದಿಂದ ಪರಿಹಾರ ದೊರೆತಿಲ್ಲ ಎಂಬುದು ಬೆಳೆಗಾರರ ಅಳಲು.

Vijaya Karnataka
Pg.08

ಗುಣಮಟ್ಟಕ್ಕೆ ಹೊಡೆತ । ತೂಕವೂ ಇಳಿಮುಖ ಕಾರಣ

ಅಡಕೆ ಸುಲಿಯುವ ಯಂತ್ರದಿಂದ ರೈತರು ವಿಮುಖ

■ **ತಿ.ನಾ.ಪದ್ಮನಾಭ** ಮಾಗಡಿ ಗ್ರಾಮಾಂತರ ಅಡಕೆಯ ಗುಣಮಟ್ಟ ಕಡಿಮೆ ಆಗುತ್ತದೆ ಎಂಬ ಆತಂಕದಿಂದ ಕಾರ್ಮಿಕರ ಕೊರತೆ ನೀಗಿಸಲು ಅಭಿವೃದ್ಧಿಪಡಿಸಲಾದ ಅಡಕೆ ಸುಲಿಯುವ ಯಂತ್ರ ಬಳಕೆಯಿಂದ ಅಡಕೆ ಬೆಳೆಗಾರರು ನಿಧಾನವಾಗಿ ವಿಮುಖ ರಾಗುತ್ತಿದ್ದಾರೆ.

ಮಲೆನಾಡು ಮತ್ತು ಕರಾವಳಿ ಬೆಳೆಯಾಗಿದ್ದ ಅಡಕೆ ಇಂದು ರಾಜ್ಯದ ಬಹುತೇಕ ಭಾಗದಲ್ಲಿ ಬೆಳೆಯಲಾಗುತ್ತಿದೆ. ಅಡಕೆಯನ್ನು ಸುಲಿದು ಬೇಯಿಸಿ ಒಣಗಿಸುವುದು ರೈತರಿಗೆ ದೊಡ್ಡ ಸಮಸ್ಯೆಯಾಗಿತ್ತು. ಕಾರ್ಮಿಕರ ಕೊರತೆಯಿಂದ ಅಡಕೆ ಸುಲಿಯುವುದು ದೊಡ್ಡ ತಲೆನೋವಾಗಿತ್ತು. ಇದಕ್ಕೆ ಪರಿಹಾರವಾಗಿ ಬಂದಿದ್ದೇ ಅಡಕೆ ಸುಲಿಯುವ ಯಂತ್ರ. ಒಂದಷ್ಟು ಕಾಲ ಇದು ಜನಪ್ರಿಯತೆಯನ್ನೂ ಗಳಿಸಿತ್ತು.

ಡಬಲ್ ಕೆಲಸ

ಅಡಕೆ ಸುಲಿಯುವ ಯಂತ್ರವು ಸ್ವಚ್ಛವಾಗಿ ಅಡಕೆಯನ್ನು ಸುಲಿಯುವುದಿಲ್ಲ. ಅರ್ಧ ಸಿಪ್ಪೆ ಅಡಕೆಯಲ್ಲೇ ಅಂಟಿರುತ್ತದೆ. ಜೊತೆಗೆ ಅಡಕೆ ಜಜ್ಜಿದಂತಾಗಿ ರಸ ಸೋರಿ ಹೋಗುತ್ತದೆ. ಯಂತ್ರದಲ್ಲಿ ಸುಲಿದ ಅಡಕೆಯನ್ನು ಸ್ವಚ್ಛಗೊಳಿಸಲು ಕಾರ್ಮಿಕರೇ ಬೇಕು. ಇದು ರೈತನ ಪಾಲಿಗೆ ಡಬಲ್ ಕೆಲಸ. ಅಡಕೆ ಜಜ್ಜಿ ಹೋಗಿ ರಸ ಸೋರುವುದರಿಂದ ಅಡಕೆಯ ಗುಣಮಟ್ಟ ತೀವ್ರವಾಗಿ ಕುಸಿಯುತ್ತಿದೆ ಎಂಬುದು ಬೆಳೆಗಾರರು ಹಾಗೂ ಖರೀದಿದಾರರ ದೂರು.

ತೂಕದಲ್ಲೂ ಕುಸಿತ

ಯಂತ್ರದಿಂದ ಹೊರಬಂದ ಸಿಪ್ಪೆ ಸುಲಿದ ಅಡಕೆ ಡ್ಯಾಮೇಜ್ ಆಗುವುದಲ್ಲದೇ ತೂಕವೂ ಕಡಿಮೆ ಆಗುತ್ತಿದೆ. ಯಂತ್ರ ಡ್ಯಾಮೇಜ್ ಮಾಡಿದ ಅಡಕೆ ಹಿಸುಕಿದಂತಾಗಿ ಬಿಸಿನಲ್ಲಿ ಒಣಗಿದ ಬಳಿಕ ತೂಕ ಕಳೆದುಕೊಳ್ಳುತ್ತಿದೆ. ಒಂದು ಕ್ವಿಂಟಲ್ ಅಡಕೆಯಲ್ಲಿ 6 ರಿಂದ 7 ಕೆಜಿಗಳಷ್ಟು ತೂಕ ರೈತರಿಗೆ ನಷ್ಟವಾಗುತ್ತಿದೆ ಎನ್ನುವುದು ಅಡಕೆ ಬೆಳೆಗಾರರ ಅನುಭವ ಮಾತು.



ಕೈಯಿಂದ ಅಡಕೆ ಸುಲಿಯುತ್ತಿರುವ ಮಹಿಳೆಯರು

ಇದು ಬೆಳಗಾರರ ಲೆಕ್ಕ

ಕಾರ್ಮಿಕನೊಬ್ಬನಿತ್ಯ 25 ಕಿಲೋಗಿಂತಲೂ ಹೆಚ್ಚು ಅಡಕೆ ಸುಲಿಯಬಹುದು. ಪ್ರತಿ ಕೆಜಿಗೆ 7 ರಿಂದ 8 ರೂಪಾಯಿ ಊಟ, ತಿಂಡಿ ಸೇರಿ ನೀಡುತ್ತಾರೆ. ಪ್ರತಿ ಒಬ್ಬ ಅಡಕೆ ಸಿಪ್ಪೆ ಸುಲಿವವರು ದಿನಕ್ಕೆ 650 ರಿಂದ 700 ಸಂಪಾದಿಸಬಹುದು. ಸ್ತ್ರೀ ಶಕ್ತಿ ಸಂಘದ ಮಹಿಳೆಯರು ಮತ್ತು ಇತರರಿಗೂ ಅಡಕೆ ಸಮಯದಲ್ಲಿ ಉದ್ಯೋಗ ದೊರೆತಂತಾಗುತ್ತದೆ.

ಆಳುಗಳ ಕೊರತೆಯಿಂದ ಅಡಕೆ ಸುಲಿಯುವ ಯಂತ್ರಕ್ಕೆ ಮೊರೆ ಹೋಗಿದ್ದೇವೆ ಹೊರತು. ನಮ್ಮ ಹಳೆ ಪದ್ಧತಿಯನ್ನು ಬದಲಿಸಲು ಅಲ್ಲ.
-ಚಿಕ್ಕಪ್ಪಯ್ಯ ಅಡಕೆ ಬೆಳೆಗಾರರು.

ಅಡಕೆ ಸೀಸನ್ ಇದ್ದಾಗ ಮಾತ್ರ ನಾವು ಸುಲಿಯಲು ಹೋಗುತ್ತೇವೆ. ಆದಾದ ಮೇಲೆ ಕೂಲಿ ಕೆಲಸ ಮಾಡುತ್ತೇವೆ. ಯಂತ್ರ ಬಂದು ನಮ್ಮ ಕೂಲಿಯನ್ನು ಕಿತ್ತಿದೆ
-ಗಂಗಾತೋಪಯ್ಯ ರೈತ

Vijaya Karnataka
Pg.09

Vijaya Karnataka
Pg.16

'ಕೆಎಂಎಫ್ ವಿಲೀನದಿಂದ ಹೈನುಗಾರರ ಬದುಕು ಮೂರಾಬಟ್ಟೆ'

■ **ವಿಕ ಸುದ್ದಿಲೋಕ** ಬೆಂಗಳೂರು

ಕೆಎಂಎಫ್ ಅನ್ನು ಅಮೂಲ್ ಜತೆ ವಿಲೀನ ಮಾಡುವ ಮೂಲಕ ಖಾಸಗೀಕರಣಗೊಳಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಹುನ್ನಾರ ನಡೆಸಿದ್ದಾರೆ. ಇದರಿಂದ ರಾಜ್ಯದ ಹೈನುಗಾರರ ಬದುಕು ಮೂರಾಬಟ್ಟೆಯಾಗಲಿದೆ ಎಂದು ಬಮೂಲ್‌ನ ಮಾಜಿ ಅಧ್ಯಕ್ಷ ಆರ್.ಕೆ.ರಮೇಶ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.



''ರಾಜ್ಯದಲ್ಲಿ 15 ಹಾಲು ಒಕ್ಕೂಟಗಳಿದ್ದು, 26 ಲಕ್ಷ ರೈತರು ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಉನ್ನತ ಶಿಕ್ಷಣ ಪಡೆದ ಗ್ರಾಮೀಣ ಭಾಗದ ಪದವೀಧರರು ಉದ್ಯೋಗ ಸಿಗದೆ ಹೈನುಗಾರಿಕೆ ಮೂಲಕ ಬದುಕು ಕಟ್ಟಿಕೊಂಡಿದ್ದಾರೆ. ಮತ್ತೊಂದೆಡೆ ಹೆಣ್ಣು ಮಕ್ಕಳು ಸಹ ಹೈನುಗಾರಿಕೆಯಿಂದ ಜೀವನ ಸಾಗಿಸುತ್ತಿದ್ದಾರೆ. ಅಮೂಲ್‌ನೊಂದಿಗೆ ಕೆಎಂಎಫ್ ಅನ್ನು ವಿಲೀನಗೊಳಿಸಿದರೆ, ರೈತರಿಗೆ ಅನ್ಯಾಯವಾಗಲಿದೆ,'' ಎಂದು ತಿಳಿಸಿದ್ದಾರೆ.

''ಅಮೂಲ್‌ನೊಂದಿಗೆ ಕೆಎಂಎಫ್ ಅನ್ನು ವಿಲೀನಗೊಳಿಸಲು ಅಮಿತ್ ಶಾ ತುಂಬಾ ಉತ್ಸುಕರಾಗಿದ್ದು, ಇದರ ಹಿಂದೆ ಯಾವುದೋ ಹುನ್ನಾರ ಅಡಗಿರುವಂತಿದೆ. ಡಬಲ್ ಎಂಜಿನ್ ಬಿಜೆಪಿ ಸರಕಾರಕ್ಕೆ ರೈತರಿಗೆ ಸಹಾಯ ಮಾಡಬೇಕೆಂಬ ಮನಸ್ಸಿದ್ದರೆ, ವಿಲೀನ ಕೈಬಿಟ್ಟು ಲೀಟರ್ ಹಾಲಿಗೆ ಕನಿಷ್ಠ 5 ರೂ. ಪ್ರೋತ್ಸಾಹಧನ ನೀಡಬೇಕು. ರೈತರಿಗೆ ಲೀಟರ್‌ಗೆ 29 ರೂ. ಕೊಟ್ಟು, ಗ್ರಾಹಕರಿಂದ 45 ರೂ. ಪಡೆಯಲಾಗುತ್ತಿದೆ. ಕೆಎಂಎಫ್ ಲಾಭದಲ್ಲಿದ್ದರೂ ವಿಲೀನ ಮಾಡಲು ಹೊರಟಿರುವುದು ಏಕೆ ಎಂಬ ಪ್ರಶ್ನೆ ಮೂಡಿದೆ. ಬಿಜೆಪಿಗೆ ಸಾಮಾನ್ಯ ಜನರು, ಬಡವರ ಮೇಲೆ ಕನಿಕರವಿದ್ದರೆ, ಹಾಲಿನ ದರ ಇಳಿಕೆ ಮಾಡಲಿ. ರೈತರಿಗೆ ಹೆಚ್ಚಿನ ಪ್ರೋತ್ಸಾಹಧನ ನೀಡಲಿ'' ಎಂದು ಆಗ್ರಹಿಸಿದರು.

Vijayavani
Pg.09

ಸಬ್ಸಿಡಿ ಕಡಿತಕ್ಕೆ ಸರ್ಕಾರ ಚಿಂತನೆ

3.70 ಲಕ್ಷ ಕೋಟಿ ರೂ. ಕಡಿತ ಸಾಧ್ಯತೆ | ಉಚಿತ ಪಡಿತರಕ್ಕೆ ತೆರೆ?

ನವದೆಹಲಿ: ಆಹಾರ ಮತ್ತು ರಸಗೊಬ್ಬರಗಳ ಮೇಲಿನ ಸಬ್ಸಿಡಿಯಲ್ಲಿ ಶೇಕಡ 26ರಷ್ಟು ಕಡಿತ ಮಾಡುವ ಮೂಲಕ ಹೊಸ ವರ್ಷದಲ್ಲಿ ಜನರು ಹಾಗೂ ರೈತರ ಜೀವನದ ಮೇಲೆ ಕೇಂದ್ರ ಸರ್ಕಾರ ಭಾರಿ ಬರೆ ಎಳೆಯಲು ಸಜ್ಜಾಗಿದೆ. ಏಪ್ರಿಲ್‌ನಿಂದ ಆರಂಭವಾಗುವ ಹಣಕಾಸು ವರ್ಷದಲ್ಲಿ ಒಟ್ಟು 3.70 ಲಕ್ಷ ಕೋಟಿ ರೂಪಾಯಿಯಷ್ಟು ಸಬ್ಸಿಡಿಗಳನ್ನು ಕಡಿತ ಮಾಡಲಾಗುತ್ತದೆ. ಕೋವಿಡ್ ಅವಧಿಯಲ್ಲಿ ತುಂಬಾ ಹೆಚ್ಚಾಗಿದ್ದ ಆರ್ಥಿಕ ಕೊರತೆಯನ್ನು ನಿಯಂತ್ರಿಸಲು ಈ ಕ್ರಮಕ್ಕೆ ಸರ್ಕಾರ ಮುಂದಾಗಿದೆ ಎಂದು ಮೂವರು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ 39.45 ಲಕ್ಷ ಕೋಟಿ ರೂಪಾಯಿ ಬಜೆಟ್ ವೆಚ್ಚದಲ್ಲಿ ಆಹಾರ ಮತ್ತು ರಸಗೊಬ್ಬರ ಸಬ್ಸಿಡಿಯ ಪಾಲೇ ಎಂಟನೇ ಒಂದರಷ್ಟಿದೆ. ಹಲವು ರಾಜ್ಯಗಳಲ್ಲಿ ಅಸೆಂಬ್ಲಿ ಚುನಾವಣೆಗಳು ನಡೆಯಲಿರುವ ಹಿನ್ನೆಲೆಯಲ್ಲಿ ವಿಶೇಷವಾಗಿ ಆಹಾರ ಸಬ್ಸಿಡಿಗಳ ಇಳಿಕೆಯು ರಾಜಕೀಯವಾಗಿ ಸೂಕ್ಷ್ಮ ವಿಚಾರವಾಗಲಿದೆ.

2.30 ಲಕ್ಷ ಕೋಟಿ ರೂ.: ಮುಂದಿನ ವಿತ್ತ ವರ್ಷದಲ್ಲಿ ಬಜೆಟ್‌ನಲ್ಲಿ 2.30 ಲಕ್ಷ ಕೋಟಿ ರೂಪಾಯಿ ಆಹಾರ ಸಬ್ಸಿಡಿ ಒದಗಿಸಲು ಕೇಂದ್ರ ಸರ್ಕಾರ ಚಿಂತಿಸುತ್ತಿದೆ. ಮಾರ್ಚ್ 31ರ ವರೆಗಿನ ಪ್ರಸಕ್ತ ವರ್ಷದಲ್ಲಿ ಅದು 2.70 ಲಕ್ಷ ಕೋಟಿ ರೂಪಾಯಿ ಆಗಿದೆ. ರಸಗೊಬ್ಬರ ಸಬ್ಸಿಡಿಯಲ್ಲಿ ಸುಮಾರು 1.40 ಲಕ್ಷ ಕೋಟಿ ರೂಪಾಯಿ ಕಡಿತವಾಗುವ ನಿರೀಕ್ಷೆಯಿದೆ. ಈ ವರ್ಷದ ಸುಮಾರು 2.30 ಲಕ್ಷ ಕೋಟಿ ರೂಪಾಯಿಗೆ ಹೋಲಿಸಿದರೆ ಇದು ಗಣನೀಯ ಇಳಿಕೆಯಾಗಲಿದೆ. ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಗಳು ಈ ಎಲ್ಲ ಮಾಹಿತಿ ನೀಡಿದ್ದಾರೆ.

ಉಚಿತ ಆಹಾರ ಯೋಜನೆ ಅಂತ್ಯ: ಕೋವಿಡ್ ಸಾಂಕ್ರಾಮಿಕದ ಕಾಲದ ಉಚಿತ ಆಹಾರ ಧಾನ್ಯ ವಿತರಣೆ ಯೋಜನೆಯನ್ನು ಅಂತ್ಯಗೊಳಿಸುವ ಮೂಲಕ ಸರ್ಕಾರಕ್ಕೆ ಹೆಚ್ಚಿನ ಉಳಿತಾಯ ಆಗಲಿದೆ. ಅದರ ಬದಲಿಗೆ ಕಡಿಮೆ ಖರ್ಚಿನ ಯೋಜನೆಯನ್ನು ಜಾರಿಗೊಳಿಸಲಾಗುತ್ತದೆ. ಇದರಿಂದಾಗಿ ವರ್ಷದಲ್ಲಿ ಬಡವರಿಗೆ ದೊರೆಯುವ ಪಡಿತರದಲ್ಲಿ ಅರ್ಧದಷ್ಟು ಕಡಿತವಾಗಲಿದೆ. ಈ ವರ್ಷ ಕರ್ನಾಟಕ ಸಹಿತ 9 ರಾಜ್ಯಗಳ ವಿಧಾನ ಸಭೆಗಳಿಗೆ ಹಾಗೂ ಮುಂದಿನ ವರ್ಷ ಲೋಕಸಭೆಗೆ ಚುನಾವಣೆ ನಡೆಯಲಿದ್ದು ಆಹಾರ ಹಾಗೂ ರಸಗೊಬ್ಬರ ಸಬ್ಸಿಡಿ ಹೊಡೆತದ ಪರಿಣಾಮವನ್ನು ಸರ್ಕಾರ ಹೇಗೆ ನಿಭಾಯಿಸಲಿದೆ ಎಂಬ ಕುತೂಹಲ ಉಂಟಾಗಿದೆ.



ಶೇಕಡ 6.4 ಜಿಡಿಪಿ ಗುರಿ

ಸರ್ಕಾರ ವಿತ್ತೀಯ ಕೊರತೆಯನ್ನು ನಿಯಂತ್ರಿಸಲು ಉತ್ಸುಕವಾಗಿದ್ದು ಪ್ರಸಕ್ತ ವಿತ್ತ ವರ್ಷಕ್ಕೆ ಶೇಕಡ 6.4 ಜಿಡಿಪಿ ಸಾಧಿಸುವ ಗುರಿ ಹೊಂದಿದೆ. ಇದು ಸಾಕ್ರಾಮಿಕತೆ ಅವಧಿ ಹೊರತುಪಡಿಸಿ, ಕಳೆದ ದಶಕದ ಸರಾಸರಿ ಶೇಕಡ 4ರಿಂದ ಶೇ. 4.5ಕ್ಕಿಂತ ಹೆಚ್ಚಿನ ಗುರಿಯಾಗಿದೆ. ಕೋವಿಡ್ ಸಾಂಕ್ರಾಮಿಕ ಕಾಲದಲ್ಲಿ ವೆಚ್ಚ ಗಗನಕ್ಕೇರಿದ್ದು ಅನುಪಾತವು ಶೇಕಡ 9.3ರಷ್ಟಕ್ಕೆ ಏರಿತ್ತು.

ಹೊಸ ವರ್ಷದ ಗಿಫ್ಟ್ ಎಂದು ಕಾಂಗ್ರೆಸ್ ವ್ಯಂಗ್ಯ

ಆಹಾರ ಮತ್ತು ರಸಗೊಬ್ಬರ ಸಬ್ಸಿಡಿ ಕಡಿತದ ಕೇಂದ್ರದ ಯೋಚನೆಯು ದೇಶದ ಜನತೆಗೆ ಪ್ರಧಾನಿ ನರೇಂದ್ರ ಮೋದಿಯವರ ಹೊಸ ವರ್ಷದ 'ಕೊಡುಗೆ' ಆಗಿದೆ ಎಂದು ಕಾಂಗ್ರೆಸ್ ಪಕ್ಷ ಮಂಗಳವಾರ ವ್ಯಂಗ್ಯವಾಡಿದೆ. 81 ಕೋಟಿ ಬಡವರ ಪಡಿತರ ಸಾಮಗ್ರಿಗೆ ಅರ್ಧದಷ್ಟು ಕೊಕ್ಕೆ ಬೀಳಲಿದೆ. 10 ಕೆಜಿ ಆಹಾರ ಧಾನ್ಯ ಪಡೆಯಲು ಅರ್ಹರಾಗಿರುವವರಿಗೆ ಇನ್ನು ಮುಂದೆ ಕೇವಲ 5 ಕೆಜಿ ಸಿಗಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಹೇಳಿದ್ದಾರೆ.



ಪ್ರಧಾನಿ ಮೋದಿ ಸಚಿವ ಸಂಪುಟವು ಪ್ರಧಾನ ಮಂತ್ರಿ ಗರೀಬ್ ಅನ್ನ ಕಲ್ಯಾಣ ಯೋಜನೆಯನ್ನು ಸ್ಥಗಿತಗೊಳಿಸಿರುವುದರಿಂದ 2023ನೇ ವರ್ಷವು ಹತಾಶ ಸುದ್ದಿಯೊಂದಿಗೆ ಆರಂಭವಾಗಿದೆ ಎಂದು ರಮೇಶ್ ಟೀಕಿಸಿದ್ದಾರೆ.

